(b) (i) 126.
(ii) 8 Scheduled Castes.

(c) Suitability of Officers for the posts of Heads of Departments will be examined at the time of filling up the posts.

(d) Does not arise in view of reply to (c).

ರಾಜ್ಯ ಸರ್ಕಾರಿ ನೌಕರರಿಗೂ ಕೇಂದ್ರ ಸರ್ಕಾರದ ನೌಕರರಿಗೂ ವೇತನ ಮತ್ತು ತುಟ್ಟಿ ಭತ್ಯದಲ್ಲಿಯ ತಾರತಮ್ಯ

೬೦. ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಸಿರ್ಸಿ).—ಮಾನ್ಯ ಅರ್ಥ ಸಚಿವರು ದಯವಿಟ್ಟು ಈ ಕೆಳಕಂಡ ವಿಷಯಂಗಳನ್ನು ದಯವಿಟ್ಟು ತಿಳಿಸುವರೆ :—

(ಎ) ರಾಜ್ಯದಲ್ಲಿರುವ ಸರ್ಕಾರಿ ನೌಕರರ ಒಟ್ಟು ಸಂಖ್ಯೆ ಎಷ್ಟು ;

(ಬಿ) ಈ ಎಲ್ಲಾ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರದ ಶ್ರೇಣಿಯಲ್ಲಿ ವೇತನ ಮತ್ತು ತುಟ್ಟಿಭತ್ಯ ಕೊಡಲು ಸರ್ಕಾರಕ್ಕೆ ತಗಲಬಹುದಾದ ಹೆಚ್ಚಿನ ಹೊಬಲಿಗೆಷ್ಟು ;

(ಸಿ) ಒಂದೇ ಕಡೆ ನೆಲೆಸಿರುವ ರಾಜ್ಯಸರ್ಕಾರವೇ ಒಂದು ಶ್ರೇಣಿಯಲ್ಲಿ ಕೇಂದ್ರ ಸರ್ಕಾರವೇ ಮತ್ತೊಂದು ಶ್ರೇಣಿಯಲ್ಲಿ ವೇತನ ಮತ್ತು ತುಟ್ಟಿಭತ್ಯ ಕೊಡುತ್ತಿರುವುದರಿಂದ ರಾಜ್ಯಸರ್ಕಾರದ ನೌಕರ ವರ್ಗಕ್ಕೆ ಅತೃಪ್ತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಡಿ) ಈ ತಾರತಮ್ಯವನ್ನು ಸರಿಪಡಿಸಿ ಏಕರೂಪತೆ ಸ್ಥಾಪಿಸಲು ಸರ್ಕಾರ ಪರ್ಯಾಲೋಚಿಸಿದೆಯೆ ?

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಸಚಿವರು). —

ಉತ್ತರ. - (ಎ) ೨.೨೪ ಲಕ್ಷ.

(ಬಿ) (೧) ಕೇಂದ್ರ ಹಾಗೂ ರಾಜ್ಯದ ಸರ್ಕಾರಿ ನೌಕರರ ತುಟ್ಟಿಭತ್ಯದ ದರಗಳಲ್ಲಿ ಏನೂ ಅಂತರವಿಲ್ಲ.

(೨) ಕೆಳದರ್ಜೆಗಳಲ್ಲಿ ಮಾತ್ರ ಆಯಾ ಹುದ್ದೆಗಳ ಕರ್ತವ್ಯಗಳನ್ನೂ ಹೊಣೆಗಾರಿಕೆಗಳನ್ನು ಸುಲಭವಾಗಿ ಹೋಲಿಸಲು ಸಾಧ್ಯ. ಆದ್ದರಿಂದ ಕೆಳದರ್ಜೆಗಳಲ್ಲಿ ಮಾತ್ರ ಕೇಂದ್ರ ಮತ್ತು ರಾಜ್ಯಸರ್ಕಾರಿ ನೌಕರರ ವೇತನ ಭತ್ಯಗಳನ್ನು ಹೋಲಿಸಬಹುದಾಗಿದೆ. ಇತರ ದರ್ಜೆಗಳ ಬಗ್ಗೆ ಹೇಳುವುದಾದರೆ ಕೆಲಸದ ಪರಿಶೀಲ್ಯ ಮಾಪನ ಮಾಡಿ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿಯೇ ತುಲನೆಮಾಡಲು ಸಾಧ್ಯ.

(ಸಿ) ಈ ಸಂಬಂಧದಲ್ಲಿ ನೌಕರರ ಸಂಘಟನೆಯಿಂದ ಕೆಲವು ಮನವಿಗಳು ಬಂದಿವೆ.

(ಡಿ) ೧೯೬೧ ರಿಂದ ತುಟ್ಟಿಭತ್ಯದ ದರಗಳನ್ನು ೧೬ ಸಲ ಪರಿಷ್ಕರಿಸಲಾಗಿದೆ. ೧೯೫೭ ರಿಂದ ವೇತನ ಶ್ರೇಣಿಗಳನ್ನು ಮೂರುಸಲ ಪರಿಷ್ಕರಿಸಲಾಗಿದೆ. ವೇತನ ಶ್ರೇಣಿಗಳಲ್ಲಿರುವ ಅಂತರವನ್ನು ಕಡಿಮೆ ಮಾಡಲು ಸರ್ಕಾರ ಸಾಧ್ಯವಾದ ಎಲ್ಲಾ ಕ್ರಮಗಳನ್ನೂ ಕೈಕೊಂಡಿದೆ.

ದತ್ತೂರಿ ಬೀಜ ಮಿಶ್ರಿತ ಆಹಾರಧಾನ್ಯ ಹಂಚಿಕೆ

೬೩. ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಆಹಾರ ಮತ್ತು ನಿತ್ಯೋಪಯೋಗಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ :—

(ಅ) ಮಂಡ್ಯಾ ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಮೂಲಕ ಜನರಿಗೆ ೧೯೭೩ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಹಂಚಿಕೆ ಮಾಡಲಾದ ಜೋಳ ಸೋದಿಯಲ್ಲಿ ವಿಷಪೂರಿತ ದತ್ತೂರಿ ಬೀಜ ಬೆರೆಕೆಯಾಗಿದ್ದು ನಿಜವೇ ;

(ಆ) ಈ ದತ್ತೂರಿ ಬೀಜವನ್ನು ಆರಿಸಿಕೊಂಡು ಅನಂತರ ಆಹಾರಕ್ಕೆ ಉಪಯೋಗಿಸಬೇಕೆಂದು ಅಲ್ಲಿಯ ಜಿಲ್ಲಾಧಿಕಾರಿಗಳು ಬಳಕೆದಾರರಿಗೆ ಸೂಚನೆ ನೀಡಿರುವುದು ನಿಜವೇ ;

(ಇ) ಇಂತಹ ವಿಷ ಮಿಶ್ರಿತ ಆಹಾರ ಧಾನ್ಯ ರಾಜ್ಯಕ್ಕೆ ಸರಬರಾಜು ಮಾಡಿದವರು ಯಾರು ? ಈ ಬಗ್ಗೆ ಕೈಗೊಂಡ ಕ್ರಮಗಳಾವುವು ?